# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 999

ಸದಸ್ಯರ ಹೆಸರು: ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು - ಮಾನ್ಯ ಗಣಿ ಮತ್ತು ಭೂ, ವಿಜ್ಞಾನ , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಉತ್ತರಿಸಬೇಕಾದ ದಿನಾಂಕ 27.12.2022

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಇತ್ತೀಚೆಗೆ ಹೆಚ್ಚು ಹೆಚ್ಚು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಹಾವೇರಿ, ಗದಗ, ಹುಬ್ಬಳ್ಳಿ- ಧಾರವಾಡ ಜಿಲ್ಲೆಗಳಲ್ಲಿ ಬಾಕಿ ಇರುವ ಮಕ್ಕಳ ಹಕ್ಕುಗಳ ಪ್ರಕರಣಗಳವಾರು ವಿವರ ನೀಡುವುದು)</td><td>
ಬಂದಿದೆ,
ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಜ್ಯದಲ್ಲಿ ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಕಾರ್ಯನಿರ್ವಹಿಸುತ್ತಿದೆ. ಮಕ್ಕಳ ಹಕ್ಕುಗಳ ಉಲ್ಲಂಘನೆಯಾದಲ್ಲಿ ಆಯೋಗದಿಂದ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲು ಅವಕಾಶವಿರುತ್ತದೆ.
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಲ್ಲಿ ಕಳೆದ ಎರಡು ವರ್ಷಗಳಲ್ಲಿ ದಾಖಲಾದ ಪ್ರಕರಣಗಳು:
<table>
<tr><th>ಕ್ರ. ಸಂ</th><th>ವರ್ಷ</th><th>ಸ್ವೀಕೃತಿಗೊಂಡ ಪ್ರಕರಣಗಳು</th><th>ಮುಕ್ತಾಯವಾದ ಪ್ರಕರಣಗಳು</th><th>ಚಾಲ್ತಿಯಲ್ಲಿರುವ ಪ್ರಕರಣಗಳು</th></tr>
<tr><td>1</td><td>2020-21</td><td>283</td><td>60</td><td>223</td></tr>
<tr><td>2</td><td>2021-22</td><td>480</td><td>124</td><td>356</td></tr>
<tr><td colspan="2">ಒಟ್ಟು</td><td>763</td><td>184</td><td>579</td></tr>
</table>
ಹಾವೇರಿ, ಗದಗ, ಹುಬ್ಬಳ್ಳಿ- ಧಾರವಾಡ ಜಿಲ್ಲೆಗಳಲ್ಲಿ ಬಾಕಿ ಇರುವ ಮಕ್ಕಳ ಹಕ್ಕುಗಳ ಪ್ರಕರಣಗಳವಾರು ವಿವರ ಕೆಳಕಂಡಂತಿವೆ:
<table>
<tr><th>ಪ್ರಕರಣ</th><th>ಹಾವೇರಿ</th><th>ಗದಗ</th><th>ಹುಬ್ಬಳ್ಳಿ- ಧಾರವಾಡ</th></tr>
<tr><td>ಪೋಕ್ಸೋ</td><td>01</td><td>-</td><td>-</td></tr>
<tr><td>ದೈಹಿಕ, ಮಾನಸಿಕ ಕಿರುಕುಳ</td><td>01</td><td>-</td><td>-</td></tr>
<tr><td>ಆರ್.ಟಿ.ಇ</td><td>01</td><td>01</td><td>-</td></tr>
<tr><td>ಮರಣ</td><td>01</td><td>-</td><td>06</td></tr>
<tr><td>ಇತರೆ</td><td>03</td><td>03</td><td>01</td></tr>
<tr><td>ಒಟ್ಟು</td><td>07</td><td>04</td><td>07</td></tr>
</table>
ಇದಲ್ಲದೇ , ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಬಾಲ್ಯವಿವಾಹ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವಲ್ಲದ ಬಾಲಕಾರ್ಮಿಕ, ಭಿಕ್ಷಾಟನೆ, ಪರಿತ್ಯಕ್ತ, ಮುಂತಾದ ಪ್ರಕರಣಗಳಲ್ಲಿ ರಕ್ಷಿಸಲ್ಪಟ್ಟ
</td></tr>
</table>

| | | |
|---|---|---|
| | | ಮಕ್ಕಳು, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015 ತಿದ್ದುಪಡಿ ಕಾಯ್ದೆ 2021ರಡಿ ಪಾಲನೆ ಮತ್ತು ರಕ್ಷಣೆಗೆ ಗುರುತಿಸಲ್ಪಟ್ಟಲ್ಲಿ, ಅಂತಹ ಮಕ್ಕಳಿಗೆ ಪಾಲನೆ, ರಕ್ಷಣೆ, ಶಿಕ್ಷಣ ಮತ್ತು ಪುನರ್ವಸತಿಯನ್ನು ಮಕ್ಕಳ ಕಲ್ಯಾಣ ಸಮಿತಿಯ ಆದೇಶದನ್ವಯ ಕಲ್ಪಿಸಲಾಗುತ್ತಿದೆ.<br><br>ಹಾವೇರಿ, ಗದಗ, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಲ್ಲಿ ಜನವರಿ 2022 ರಿಂದ ನವೆಂಬರ್ 2022ರವರೆಗೂ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ದಾಖಲಾಗಿರುವ ಹಾಗೂ ಬಾಕಿ ಪ್ರಕರಣಗಳ ಸಂಖ್ಯೆಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಆ) | ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರುಗಳನ್ನು ನೇಮಕ ಮಾಡಲು ಇರುವ ಮಾನದಂಡಗಳೇನು; | ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮ 2010ರ ನಿಯಮ 3 ರಂತೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಳ್ಳಲು ಈ ಕೆಳಕಂಡ ಅರ್ಹತೆ ಹೊಂದಿರಬೇಕಾಗಿರುತ್ತದೆ:<br>• ಮಾನವ ಹಕ್ಕುಗಳ ವಿಶೇಷವಾಗಿ ಮಕ್ಕಳ ಹಕ್ಕುಗಳ ಯಾವುದೇ ಭಾಗದ ಉಲ್ಲಂಘನೆಯ ದಾಖಲೆಯನ್ನು ಅಥವಾ ಕ್ರಿಮಿನಲ್ ಅಪರಾಧದ ಹೊಂದಿರುವ ಯಾವುದೇ ವ್ಯಕ್ತಿ ಅಧ್ಯಕ್ಷರಾಗಲು ಅರ್ಹರಾಗಿರುವುದಿಲ್ಲ.<br>• ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣೆ ಮತ್ತು ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವ ವಕಾಲತ್ತು ಕ್ಷೇತ್ರದಲ್ಲಿ ಕನಿಷ್ಠ ಐದು ವರ್ಷಗಳ ಕೆಲಸದ ಅನುಭವವನ್ನು ವ್ಯಕ್ತಿಯು ಹೊಂದಿರಬೇಕು.<br>• ವ್ಯಕ್ತಿಯು ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿ ಅಥವಾ ಸದಸ್ಯನಾಗಿರಬಾರದು .<br>• ಅಧ್ಯಕ್ಷರ ಅವಧಿಯು 3 ವರ್ಷ ಅಥವಾ 65 ವರ್ಷ ವಯಸ್ಸಿನವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಇರುತ್ತದೆ. |
| ಇ) | ಪ್ರಸ್ತುತ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ ಹಾಗೂ ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ವಹಿಸಿದೆ? | ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:<br>• ಜಿಲ್ಲಾ ಮಟ್ಟದಲ್ಲಿ ಆರ್.ಟಿ.ಇ, ಪೋಕ್ಸೋ, ಜೆ.ಜೆ.ಕಾಯ್ದೆ ಇವುಗಳ ಪ್ರಗತಿ ಪರಿಶೀಲನೆಯನ್ನು ಕಾಲಕಾಲಕ್ಕೆ ನಡೆಸಲಾಗುತ್ತಿದೆ. ಬಾಲ್ಯ ವಿವಾಹ ನಿಷೇಧ ಕಾನೂನು, ಬಾಲಕಾರ್ಮಿಕ ನಿಷೇಧ ಕಾನೂನು ಇತ್ಯಾದಿ ಅನುಷ್ಠಾನಗಳ ಜಿಲ್ಲಾವಾರು- ತಾಲ್ಲೂಕು ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆಯೋಗದ ಸದಸ್ಯರಿಂದ ನಿಯಮಿತವಾಗಿ ಅಂಗನವಾಡಿ ಕೇಂದ್ರಗಳು, ಮಕ್ಕಳ ಪಾಲನಾ ಸಂಸ್ಥೆಗಳು ಹಾಗೂ ಸರ್ಕಾರಿ ಬಾಲ ಮಂದಿರ ಇತ್ಯಾದಿ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ. ವಿಭಾಗೀಯಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲಾಗುತ್ತಿದೆ.<br>• ಆಯೋಗವು ತನ್ನ ಕಾರ್ಯಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅನೇಕ ನವೀನ ಕ್ರಿಯಾಶೀಲ ಮಾದರಿಗಳನ್ನು ಅನುಸರಿಸುತ್ತಿದೆ. ಅವುಗಳಲ್ಲಿ ವಿಕೇಂದ್ರೀಕೃತ ಮಾದರಿಯು ಅತ್ಯಂತ ಪರಿಣಾಮಕಾರಿಯಾಗಿದ್ದು, ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳಿಗೆ ಸ್ಥಳೀಯ ಮಟ್ಟದಲ್ಲಿ ಪರಿಹಾರ ಕಲ್ಪಿಸುವುದು ಹಾಗೂ ಸಂಕಷ್ಟದಲ್ಲಿರುವ ಮಕ್ಕಳನ್ನು |

ಸಕಾಲದಲ್ಲಿ ರಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ.

- ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳನ್ನು 7 ವಲಯಗಳನ್ನಾಗಿ ವಿಭಜಿಸಿ, ಅಧ್ಯಕ್ಷರು ಹಾಗೂ ಸದಸ್ಯರು ಒಂದೊಂದು ವಲಯದ ಉಸ್ತುವಾರಿಯನ್ನು ವಹಿಸಿಕೊಂಡು, ಮಕ್ಕಳಿಗೆ ನ್ಯಾಯ ದೊರಕಿಸುವಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
- ಆಯೋಗವು ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ನಿಗದಿತವಾಗಿ ಎಲ್ಲಾ ಸಂಬಂಧಿಸಿದ ಇಲಾಖೆಗಳನ್ನು ಒಗ್ಗೂಡಿಸಿ, ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸುತ್ತದೆ. ಮಕ್ಕಳು ಎದುರಿಸುತ್ತಿರುವ ಬಾಲ್ಯವಿವಾಹ, ಬಾಲಕಾರ್ಮಿಕತೆ, ಮಕ್ಕಳ ಶಿಕ್ಷಣಕ್ಕೆ ಧಕ್ಕೆ ತರುವಂತಹ ವಿಚಾರಗಳು ಮುಂತಾದ ಪ್ರಗತಿಯನ್ನು ಪರಿಶೀಲಿಸಿ, ಇಲಾಖೆಗಳಿಗೆ ಸೂಕ್ತ ಸಲಹೆ ಹಾಗೂ ನಿರ್ದೇಶನಗಳನ್ನು ನೀಡಿ, ಸಂಬಂಧಪಟ್ಟ ಇಲಾಖೆಗಳು ಅವುಗಳನ್ನು ಕಾರ್ಯರೂಪಕ್ಕೆ ತರುವಂತೆ ಮುಂಜಾಗ್ರತೆ ವಹಿಸುತ್ತದೆ.
- ಆಯೋಗವು ಮಕ್ಕಳ ಭಿಕ್ಷಾಟನೆಯನ್ನು ನಿರ್ಮೂಲನೆ ಮಾಡಲು "ನಮ್ಮ ನಡೆ ಮಕ್ಕಳ ಭಿಕ್ಷಾಟನೆ ನಿರ್ಮೂಲನೆ ಕಡೆ" ಎಂಬ ಆಂದೋಲಕ್ಕೆ ಚಾಲನೆ ನೀಡಿ, ಸಂಬಂಧಪಟ್ಟ ಸರ್ಕಾರಿ ಸಂಸ್ಥೆಗಳ ಹಾಗೂ ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಒಗ್ಗೂಡಿ, ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿತು. ನಂತರದಲ್ಲಿ ಇದೇ ವಿಷಯವಾಗಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ಆದೇಶದ ಮೇರೆಗೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಬೆಂಗಳೂರು ನಗರ ಜಿಲ್ಲಾದ್ಯಂತ ಭಿಕ್ಷಾಟನೆಯಲ್ಲಿ ಹಾಗೂ ಬೀದಿಬದಿ ವ್ಯಾಪಾರದಲ್ಲಿ ತೊಡಗಿದ ಮಕ್ಕಳನ್ನು ಗುರುತಿಸಿ, ಅವರಿಗೆ ಪುನರ್ವಸತಿ ಕಲ್ಪಿಸುವ ಕೆಲಸವನ್ನು ಕೈಗೆತ್ತಿಕೊಂಡಿತು.
- ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾ ಪಂಚಾಯತ್ ಹಾಗೂ ಎಲ್ಲಾ ಇಲಾಖೆಗಳ ಸಹಭಾಗಿತ್ವದಲ್ಲಿ "ಗ್ರಾಮಪಂಚಾಯತ್ ನಡೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಡೆ" ಎಂಬ ಸಮುದಾಯ ಆಧಾರಿತ ಕಾರ್ಯಕ್ರಮವನ್ನು ಪ್ರತಿ ಶನಿವಾರ ಆಯೋಜಿಸಿ, ವರ್ಷಾದ್ಯಂತ ಸುಮಾರು 237 ಗ್ರಾಮ ಪಂಚಾಯತ್‌ಗಳಲ್ಲಿ ಮೂರು ತಿಂಗಳ ಕಾಲ ಸಮುದಾಯ ಆಧಾರಿತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ, ಮಾಧ್ಯಮ ಗಳಿಂದ ಮಕ್ಕಳ ಮೇಲಾಗುವ ಪ್ರಭಾವ, ಬಾಲ್ಯವಿವಾಹ, ಬಾಲಕಾರ್ಮಿಕತೆ, ಶಿಕ್ಷಣ, ಪೋಕ್ಸೋ, ಹೆಣ್ಣು ಮಕ್ಕಳ ಸಬಲೀಕರಣ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ ಕಾಯ್ದೆ ಕುರಿತು ಮಾಹಿತಿ, ಸರ್ಕಾರಿ ಶಾಲೆಗಳ ಸಬಲೀಕರಣ ಮುಂತಾದ ವಿಷಯಗಳ ಬಗ್ಗೆ ಕಿರುಚಿತ್ರ ಪ್ರದರ್ಶನ, ಬೀದಿ ನಾಟಕ, ಬಿತ್ತಿ ಪತ್ರ, ಗೋಡೆ ಬರಹ, ಚರ್ಚೆ, ವಿಚಾರಗೋಷ್ಠಿ ಇನ್ನಿತರೆ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಗಿರುತ್ತದೆ. ಈ ಕಾರ್ಯಕ್ರಮದ ಪರಿಣಾಮವಾಗಿ ಕೋವಿಡ್-19ರ ಮೊದಲ ವರ್ಷದಲ್ಲಿ (2019) ಸರಿಸುಮಾರು 257 ರಷ್ಟಿದ್ದ ಬಾಲ್ಯವಿವಾಹ ಪ್ರಕರಣಗಳು, ಪ್ರಸ್ತುತ ಸಾಲಿನಲ್ಲಿ 92ಕ್ಕೆ ಇಳಿದಿರುವುದು ಕಾರ್ಯಕ್ರಮದ ಯಶಸ್ಸಿಗೆ ಹಿಡಿದ

| | | |
|---|---|---|
| | | ಕೈಗನ್ನಡಿಯಾಗಿದೆ.<br>• ಕೊಪ್ಪಳ ನಗರದ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬನ್ನೀಕಟ್ಟೆ ವಸತಿ ನಿಲಯದಲ್ಲಿ ವಿದ್ಯುತ್ ಷಾರ್ಟ್ ಸರ್ಕ್ಯೂಟ್ ನಿಂದ 5 ವಿದ್ಯಾರ್ಥಿಗಳ ದುರ್ಮರಣಕ್ಕೆ ಸಂಬಂಧಿಸಿದಂತೆ ಆಯೋಗವು ದೂರನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿ, ಇನ್ನೂ ಹೆಚ್ಚಿನ ವಿಚಾರಣೆ ಮತ್ತು ಪರಿಶೀಲನೆಯ ಅಗತ್ಯತೆ ಕಂಡು ಬಂದು, ಮಾನ್ಯ ಸದಸ್ಯರುಗಳ ನೇತೃತ್ವದಲ್ಲಿ **"ಸತ್ಯ ಶೋಧನಾ ಸಮಿತಿ"** ಯನ್ನು ರಚಿಸಲಾಗಿರುತ್ತದೆ. ಸಮಿತಿಯು 3 ದಿನಗಳ ಕಾಲ ಕೊಪ್ಪಳಕ್ಕೆ ಭೇಟಿ ನೀಡಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಸ್ಥಳ ಪರಿಶೀಲನೆ, ಮಕ್ಕಳೊಡನೆ ಚರ್ಚೆ, ಮರಣಕ್ಕೀಡಾದ ಮಕ್ಕಳ ಮನೆಗಳ ಭೇಟಿ ಮತ್ತು ಪೋಷಕರ ಅಭಿಪ್ರಾಯ ಸಂಗ್ರಹ ಹಾಗೂ ಸಂಬಂಧಿಸಿದ ಅಧಿಕಾರಿಗಳ ವಿಚಾರಣೆ ಹಾಗೂ ತನಿಖೆ ಮತ್ತು ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಗಳ ಭೇಟಿ ಹಾಗೂ ಚರ್ಚೆ ನಡೆಸಿ ಘಟನೆಗೆ ಕಾರಣಗಳು, ದುರ್ಮರಣಕ್ಕೀಡಾದ ವಿದ್ಯಾರ್ಥಿಗಳ ಹಿನ್ನಲೆ, ಜಿಲ್ಲಾಡಳಿತದ ಅಭಿಪ್ರಾಯ ಮತ್ತು ತನಿಖೆಯ ಒಟ್ಟು ಸಾರಾಂಶದ ವರದಿಯನ್ನು ಸಂಬಂಧಿಸಿದ ಇಲಾಖೆಗಳಿಗೆ ಸಲ್ಲಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಮೃತಪಟ್ಟ ಪ್ರತಿ ಮಕ್ಕಳ ಕುಟುಂಬಗಳಿಗೆ ರೂ. 11.00 ಲಕ್ಷಗಳ ಪರಿಹಾರದಂತೆ 5 ಮಕ್ಕಳಿಗೆ ಒಟ್ಟು. ರೂ.55.00 ಲಕ್ಷಗಳ ಪರಿಹಾರ ಮೊತ್ತವನ್ನು ಕೊಡಿಸುವಲ್ಲಿ ಆಯೋಗವು ಯಶಸ್ವಿಯಾಗಿರುತ್ತದೆ.<br>• ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಮಕ್ಕಳ ಹಕ್ಕುಗಳ ಬಗ್ಗೆ ಹಾಗೂ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಪ್ರಸ್ತುತ ಜಾರಿಯಲ್ಲಿರುವ ಕಾನೂನು ಮತ್ತು ಕಾಯ್ದೆಗಳ ಬಗ್ಗೆ ಸಾರ್ವಜನಿಕರದಲ್ಲಿ ಅರಿವು ಮೂಡಿಸಲು ಹಾಗೂ ಮಕ್ಕಳ ರಕ್ಷಣೆಗಾಗಿ ಜಾರಿಯಲ್ಲಿರುವ ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆ-1098 ಕುರಿತು ವಿವಿಧ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿರುತ್ತದೆ. ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.<br>• ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ Children in Street Situation NCPCR SOP 2.0 ಕುರಿತು ಎಲ್ಲಾ ಜಿಲ್ಲೆಗಳು ಮತ್ತು SPECIAL JUVENILE POLICE UNIT (SJPU), Child Line ಗಳಲ್ಲಿ ಸಮಾಜ ಕಲ್ಯಾಣ ಅಧಿಕಾರಿಗಳು, ಕಾರ್ಮಿಕ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಯ (NGO) ಪ್ರತಿನಿಧಿಗಳಿಂದ ಒಂದು ದಿನದ ಕಾರ್ಯಗಾರ ನಡೆಸಿ ಅರಿವು ನೀಡಲಾಗಿರುತ್ತದೆ. |

ಸಂಖ್ಯೆ: ಮಮಇ 145 ಮಭಾಬ 2022

Halappa AA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ , ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

## ಅನುಬಂಧ - 1

ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗಿರುವ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಬಂದಿರುವ ಮಕ್ಕಳ ಸಂಖ್ಯೆ (ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:100(999)ಕ್ಕೆ ಮಾಹಿತಿ)

| ಕ್ರ.ಸಂ | ಜಿಲ್ಲೆಯ ಹೆಸರು | ಜನವರಿ ಯಿಂದ ಡಿಸೆಂಬರ್ ಮಾಹೆಯವರೆಗೆ | ಮಕ್ಕಳ ಕಲ್ಯಾಣ ಸಮಿತಿ ಮುಂದೆ ದಾಖಲಾದ ಮಕ್ಕಳ ಸಂಖ್ಯೆ | ಬಾಲ್ಯ ವಿವಾಹವಾಗಿರುವ ಮಕ್ಕಳ ಸಂಖ್ಯೆ | ಬಾಲ ಕಾರ್ಮಿಕರ ಮಕ್ಕಳ ಸಂಖ್ಯೆ | ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಮಕ್ಕಳ ಸಂಖ್ಯೆ | ಭಿಕ್ಷಾಟನೆಯಲ್ಲಿ ತೊಡಗಿದ ಮಕ್ಕಳ ಸಂಖ್ಯೆ | ಪಾಲನೆ ಮತ್ತು ರಕ್ಷಣೆಗಾಗಿ ಬಂದಿರುವ ಮಕ್ಕಳ ಸಂಖ್ಯೆ | ಇನ್ನಿತರೆ | ಒಟ್ಟು | ಇತ್ಯರ್ಥವಾದ ಮಕ್ಕಳ ಸಂಖ್ಯೆ | ಬಾಕಿ ಇರುವ ಮಕ್ಕಳ ಸಂಖ್ಯೆ |
|---|---|---|---|---|---|---|---|---|---|---|---|---|
| | | | | 1 | 2 | 3 | 4 | 5 | 6 | (1 ರಿಂದ 6) | | |
| 1 | ಹಾವೇರಿ | 2019-20 | 331 | 0 | 19 | 21 | 30 | 121 | 140 | 331 | 331 | 0 |
| | | 2020-21 | 261 | 0 | 14 | 42 | 19 | 54 | 132 | 261 | 261 | 0 |
| | | 2021-22 | 410 | 0 | 21 | 38 | 18 | 314 | 19 | 410 | 410 | 0 |
| | | ಒಟ್ಟು | **1002** | **0** | **54** | **101** | **67** | **489** | **291** | **1002** | **1002** | **0** |
| 2 | ಗದಗ | 2019-20 | 199 | 8 | 0 | 17 | 3 | 141 | 30 | 199 | 189 | 10 |
| | | 2020-21 | 332 | 9 | 36 | 13 | 7 | 167 | 100 | 332 | 302 | 30 |
| | | 2021-22 | 365 | 15 | 13 | 20 | 7 | 280 | 30 | 365 | 285 | 80 |
| | | ಒಟ್ಟು | **896** | **32** | **49** | **50** | **17** | **588** | **160** | **896** | **776** | **120** |
| 3 | ಧಾರವಾಡ | 2019-20 | 333 | 9 | 0 | 9 | 28 | 262 | 25 | 333 | 319 | 14 |
| | | 2020-21 | 653 | 32 | 3 | 6 | 14 | 573 | 25 | 653 | 647 | 6 |
| | | 2021-22 | 201 | 5 | 1 | 32 | 48 | 115 | 0 | 201 | 201 | 0 |
| | | ಒಟ್ಟು | **1187** | **46** | **4** | **47** | **90** | **950** | **50** | **1187** | **1167** | **20** |

# ಅನುಬಂಧ-2

ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಮಾಹಿತಿ, ಶಿಕ್ಷಣ, ಸಂವಹನ (ಐ.ಇ.ಸಿ)

ಯೂಟ್ಯೂಬ್ ಕಾರ್ಯಕ್ರಮಗಳು:

ಮಕ್ಕಳ ರಕ್ಷಣಾ ಕಾವಲು ಸಮಿತಿ:


ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳಿಗಾಗಿ ರಚಿಸಲಾಗಿರುವ ಮಕ್ಕಳ ರಕ್ಷಣಾ ಕಾವಲು ಸಮಿತಿ ಕುರಿತಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಯೂಟ್ಯೂಬ್ ಕಾರ್ಯಕ್ರಮ ಮಾಡಲಾಗಿದೆ.




https://youtu.be/nrje3wvgNOA

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ:

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಾಗೂ ಈ ಕುರಿತಂತೆ ಅನುಸರಿಸಬೇಕಾದ ಕ್ರಮ ಹಾಗೂ ಕಾನೂನಿನ ಅರಿವು ಮೂಡಿಸಲು ಪೋಕ್ಸೋ ಕುರಿತಂತೆ ಯೂಟ್ಯೂಬ್ ಕಾರ್ಯಕ್ರಮ ಮಾಡಲಾಗಿದೆ.




https://youtu.be/ffxXb13QMus


ಕೋವಿಡ್-19 ಮುಂಜಾಗ್ರತೆಯಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳ ಪಾತ್ರ:

ಕೋವಿಡ್-19 ಸಾಂಕ್ರಾಮಿಕದ 3ನೇ ಅಲೆಯಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತಂತೆ ಅರಿವು ಮೂಡಿಸಲು ಯೂಟ್ಯೂಬ್ ಕಾರ್ಯಕ್ರಮ ಮಾಡಲಾಗಿದೆ.



https://youtu.be/AyeJbmTtwX0

ಹಿರಿಯ ಮಕ್ಕಳನ್ನು ದತ್ತು ತೆಗೆದುಕೊಳ್ಳುವಲ್ಲಿನ ಸವಾಲು ಮತ್ತು ಸಮಸ್ಯೆಗಳ ಕುರಿತು ಯೂಟ್ಯೂಬ್ ಕಾರ್ಯಕ್ರಮ.




https://youtu.be/5Brou11JS5c

**ಆಜಾದಿ ಕ ಅಮೃತ್ ಮಹೋತ್ಸವ:**

ಸ್ವಾತಂತ್ರ್ಯದ ಅಮೃತ್ ಮಹೋತ್ಸವ ಅಂಗವಾಗಿ ಕಾನೂನು ಸೇವೆಗಳ ಕುರಿತು ಮಕ್ಕಳಿಗೆ ಅರಿವು ಮೂಡಿಸುವ ಉದ್ದೇಶದಿಂದ ಎನ್‌ಎಲ್‌ಎಸ್‌ಎ ಮತ್ತು ಕೆಎಸ್‌ಎಲ್‌ಎಸ್‌ಎ ಇವರ ಸೂಚನೆಯಂತೆ ಜಿಲ್ಲಾ ಮಟ್ಟದಲ್ಲಿ ಮಕ್ಕಳಿಗೆ ಚಿತ್ರಕಲೆ. ಪ್ರಬಂಧ. ಘೋಷಣೆ ವಾಕ್ಯ ರಚನೆ. ಕಿರುಚಿತ್ರ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

**ಅರಿವು ಆನ್‌ಲೈನ್ ಕಾರ್ಯಕ್ರಮಗಳು:**

**"ತಾರುಣ್ಯಾವಸ್ಥೆಯಲ್ಲಿ ಹದಿಹರೆಯದ ಮಕ್ಕಳ ಸಮಸ್ಯೆಗಳು"**


ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ "ತಾರುಣ್ಯಾವಸ್ಥೆಯಲ್ಲಿ ಹದಿಹರೆಯದ ಮಕ್ಕಳ ಸಮಸ್ಯೆಗಳು" ಎಂಬ ವಿಷಯದ ಬಗ್ಗೆ ಆನ್‌ಲೈನ್ ಅರಿವು ಕಾರ್ಯಕ್ರಮವನ್ನು ದಿನಾಂಕ:21-10-2021ರಂದು ಸಮಯ ಬೆಳಗ್ಗೆ 11.30 ಘಂಟೆಗೆ ಲೈವ್ ಫೇಸ್‌ಬುಕ್ ಮತ್ತು ಯೂಟ್ಯೂಬ್ ಚಾನೆಲ್‌ಗಳ ಮೂಲಕ ಆಯೋಜಿಸಲಾಗಿದೆ.


https://www.facebook.com/pudept/videos/240583924791197/




"ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವಿಕೆ-ಪೋಕ್ಸೋ ಕಾಯ್ದೆ"


ಮಕ್ಕಳ ಸುರಕ್ಷತೆ ಹಾಗೂ ರಕ್ಷಣೆಯ ಹಿತದೃಷ್ಟಿಯಿಂದ ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳನ್ನು ರಕ್ಷಿಸುವುದಕ್ಕೆ ಸಂಬಂಧಿಸಿದಂತೆ "ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವಿಕೆ-ಪೋಕ್ಸೋ" ಕಾಯ್ದೆ ಕುರಿತಂತೆ ದಿನಾಂಕ:16-11-2021 ರಂದು ಸಮಯ ಮಧ್ಯಾಹ್ನ:2.30 ಗಂಟೆಗೆ ಆನ್‌ಲೈನ್ ವೆಬಿನಾರ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಎಲ್ಲಾ ಸರ್ಕಾರಿ ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗಳು ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡಿರುತ್ತಾರೆ.






ಫೇಸ್‌ಬುಕ್ ಲೈವ್ ಕಾರ್ಯಕ್ರಮ:

ಅಂತರರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ ಸಾರ್ವಜನಿಕರಲ್ಲಿ ದತ್ತು ವಿಷಯಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸುವ ಹಿನ್ನೆಲೆಯಲ್ಲಿ ಫೇಸ್‌ಬುಕ್ ಲೈವ್ ಕಾರ್ಯಕ್ರಮಗಳನ್ನು ನವೆಂಬರ್ 2021-ರಿಂದ ಡಿಸೆಂಬರ್ 1 ರವರೆಗೆ 3 ಕಾರ್ಯಕ್ರಮ ಆಯೋಜಿಸಲಾಗಿದೆ.













https://www.facebook.com/icpskarnataka/videos/588490942408451/
https://www.facebook.com/icpskarnataka/videos/609464066769222/
https://www.facebook.com/icpskarnataka/videos/608061490644116/
https://www.facebook.com/icpskarnataka/videos/614695139682126/

ಸಾಮಾಜಿಕ ಜಾಲತಾಣಗಳ ನಿರ್ವಹಣೆ:

ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್. ಯೂಟ್ಯೂಬ್. ಇನ್ಸ್ಟಾಗ್ರಾಮ್. ಟ್ವಿಟರ್‌ಗಳಲ್ಲಿ ನಿರ್ದೇಶನಾಲಯದ ಕಾರ್ಯಚಟುವಟಿಕೆಗಳ ಬಗೆಗೆ ಮತ್ತು ಮಕ್ಕಳ ರಕ್ಷಣೆಯ ಕುರಿತ ಹಲವಾರು ವಿಚಾರಗಳ ಬಗ್ಗೆ ನಿರಂತರವಾಗಿ ಪೋಸ್ಟರ್. ಚಿತ್ರ. ಕಿರುಚಿತ್ರಗಳನ್ನು ಪ್ರಸಾರಮಾಡಲಾಗಿದೆ.










ಮಕ್ಕಳ ರಕ್ಷಣಾ ನಿರ್ದೇಶನಾಲಯದ ಸಾಮಾಜಿಕ ಮಾಧ್ಯಮಗಳ ಲಿಂಕ್:


- You Tube: https://www.youtube.com/channel/UCH1xScOcJoZyZmxgWU2lsjQ/featured (ICPS Karnataka)
- Twitter: https://twitter.com/IcpsKarnataka
- Facebook: https://www.facebook.com/icpskarnataka
- Instagram: https://www.instagram.com/IcpsKarnataka
- DCP Webisite: www.icps.karnataka.gov.in

ಆಟೋ ಐಇಸಿ:

ಮಕ್ಕಳ ಸಹಾಯವಾಣಿ-1098 ಉಚಿತ ಟೆಲಿ-ಆಪ್ತಸಮಾಲೋಚನೆ ಸಂಖ್ಯೆ-14499 ಕುರಿತು ಆಟೋ ಪ್ರಚಾರ

ಮಕ್ಕಳ ಸಹಾಯವಾಣಿ-1098 ಮತ್ತು ಮಕ್ಕಳಿಗಾಗಿ ಉಚಿತ ಟೆಲಿ-ಆಪ್ತಸಮಾಲೋಚನೆ ಸಂಖ್ಯೆ-14499 ಕುರಿತಂತೆ ಸ್ಟಿಕ್ಕರ್‌ಗಳನ್ನು ಆಟೋಗಳಿಗೆ ಲೈಸೆನ್ಸ್ ನೀಡುವ ಹಾಗೂ ನವೀಕರಣದ ಸಂದರ್ಭಗಳಲ್ಲಿ ಆಟೋಗಳ ಹಿಂದೆ ಕಡ್ಡಾಯವಾಗಿ ಅಳವಡಿಸಲು ಅನುವಾಗುವಂತೆ ಸೂಕ್ತ ಸುತ್ತೋಲೆಯನ್ನು ಹೊರಡಿಸಲು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಕೋರಲಾಗಿತ್ತು ಅದರಂತೆ ವಿಜಾಪುರ, ಉತ್ತರ ಕನ್ನಡ, ಧಾರವಾಡ, ಚಿಕ್ಕಮಗಳೂರು, ದಾವಣಗೆರೆ, ಗದಗ, ಬೀದರ್, ಕಲ್ಬುರ್ಗಿ ಹಾವೇರಿ, ಚಿತ್ರದುರ್ಗ, ಬೆಂಗಳೂರು ನಗರ, ಯಾದಗಿರಿ, ತುಮಕೂರು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಈಗಾಗಲೇ ಅನುಮೋದನೆಯನ್ನು ನೀಡಲಾಗಿರುತ್ತದೆ.





ಮೆಟ್ರೋ ಡಿಜಿಟಲ್ ಪ್ರದರ್ಶನ:


ಮಕ್ಕಳ ಸಹಾಯವಾಣಿ ಸೇವೆ- 1098

ಇದು ರಾಷ್ಟ್ರ ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ ಮಕ್ಕಳ ಸಹಾಯವಾಣಿ. ಸಂಕಷ್ಟದಲ್ಲಿ ಸಿಲುಕಿರುವ ಹಾಗೂ ರಕ್ಷಣೆ ಮತ್ತು ಪೋಷಣೆಗೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸಲು ಈ ಸಂಖ್ಯೆಗೆ ಕರೆ ಮಾಡುವ ಮೂಲಕ ನೆರವು ಪಡೆಯಬಹುದಾಗಿದೆ. ಈ ಸಂಖ್ಯೆಯು ಉಚಿತ ದೂರವಾಣಿಯಾಗಿದ್ದು ಮಕ್ಕಳಾಗಲಿ ಅಥವಾ ಸಾರ್ವಜನಿಕರಾಗಲಿ ಕರೆ ಮಾಡುವ ಮೂಲಕ ತುರ್ತು ನೆರವು ಅಗತ್ಯವಿರುವ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಬಹುದಾಗಿದೆ.

ಉಚಿತ ಟೆಲಿ ಆಪ್ತಸಮಾಲೋಚನೆ ಸಂಖ್ಯೆ 14499:

"ಉಚಿತ ಟೆಲಿ-ಆಪ್ತಸಮಾಲೋಚನೆ ಟೋಲ್-ಫ್ರೀ ಸಂ: 14499" ಕರೆ ಮಾಡುವ ಮೂಲಕ ಆಪ್ತ-ಸಮಾಲೋಚನೆ ಅಗತ್ಯವಿರುವ ಕರ್ನಾಟಕದಲ್ಲಿನ ಎಲ್ಲಾ ಮಕ್ಕಳು ಹಾಗೂ ಮಕ್ಕಳಿಗಾಗಿ ಮಕ್ಕಳ ಪೋಷಕರು ಉಚಿತ "ಟೆಲಿ-ಆಪ್ತ ಸಮಾಲೋಚನೆ (ಕೌನ್ಸಲಿಂಗ್)" ಸೌಲಭ್ಯವನ್ನು ಪಡೆಯಬಹುದಾಗಿದೆ. ಈ ಎರಡು ಮಕ್ಕಳ ರಕ್ಷಣಾ ಸೇವೆಗಳ ಕುರಿತಂತೆ ಮೆಟ್ರೋ ಡಿಜಿಟಲ್ ಪ್ರದರ್ಶನ ಮಾಡಿಸಲಾಗಿದೆ.






ದತ್ತು ವಿಷಯಗಳ ಕುರಿತ ಕಿರುಚಿತ್ರಗಳ ನಿರ್ಮಾಣ:

ಜೀವಸೆಲೆ:

ಕೌಟುಂಬಿಕ ವ್ಯವಸ್ಥೆಯಲ್ಲಿ ಮಕ್ಕಳಿಗೆ ಪೋಷಕರನ್ನು ಒದಗಿಸಿಕೊಡುವುದರ ಮೂಲಕ ಶಾಶ್ವತ ಕುಟುಂಬದ ವ್ಯವಸ್ಥೆಯನ್ನು ಕಾನೂನುಬದ್ಧವಾಗಿ ಕಲ್ಪಿಸುವ ದತ್ತು ಪ್ರಕ್ರಿಯೆ ಕುರಿತಂತೆ ವಿವರವಾದ ಮಾಹಿತಿ ಸುಲಭವಾಗಿ ಸಾರ್ವಜನಿಕರಿಗೆ ತಲುಪಿಸಲು ಸಹಕಾರಿಯಾಗುವಂತೆ ಕಿರುಚಿತ್ರವನ್ನು ಸಿದ್ಧಪಡಿಸಿ ಹೆಚ್ಚಿನ ಪ್ರಚಾರಕ್ಕಾಗಿ ನಿರ್ದೇಶನಾಲಯದ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಗೊಳಿಸಲಾಗಿದೆ.

https://fb.watch/bsn8fZfoaq/

ಕಾನೂನು ಬಾಹಿರ ದತ್ತು:

ಆಸ್ಪತ್ರೆಗಳಲ್ಲಿ ನಡೆಯುವ ಕಾನೂನುಬಾಹಿರ ದತ್ತು ಮತ್ತು ಶಿಕ್ಷೆಯ ಬಗ್ಗೆ ಅರಿವು ಮೂಡಿಸಲು ಕಾನೂನುಬಾಹಿರ ದತ್ತು ಕುರಿತ ಕಿರುಚಿತ್ರವನ್ನು ಸಿದ್ಧಪಡಿಸಿ ಹೆಚ್ಚಿನ ಪ್ರಚಾರಕ್ಕಾಗಿ ನಿರ್ದೇಶನಾಲಯದ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಗೊಳಿಸಲಾಗಿದೆ.

https://fb.watch/bsnazL_PCo/

ದತ್ತು ವಿಷಯಯಕ್ಕೆ ಸಂಬಂಧಿಸಿದ ಸುಳ್ಳು ವದಂತಿಗಳು ವಿರುದ್ಧ ಅರಿವಿನ ಕಿರುಚಿತ್ರ:

ಮಕ್ಕಳನ್ನು ದತ್ತು ಪಡೆಯುವುದು ಹಾಗೂ ಕೊಡುವುದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳ ಕುರಿತು ಅರಿವು ಮೂಡಿಸಲು ಕಿರುಚಿತ್ರವನ್ನು ಸಿದ್ಧಪಡಿಸಿ ಹೆಚ್ಚಿನ ಪ್ರಚಾರಕ್ಕಾಗಿ ನಿರ್ದೇಶನಾಲಯದ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಗೊಳಿಸಲಾಗಿದೆ.

https://www.facebook.com/icpskarnataka/videos/421884836070651/?sfnsn=wiwspwa

14499 ಕಿರುಚಿತ್ರಗಳು


ಮಕ್ಕಳ ಟೆಲಿ ಆಪ್ತಸಮಾಲೋಚನೆ ಕುರಿತ 14499 ಕನ್ನಡ ಭಾಷೆಯ 5 ಕಿರುಚಿತ್ರಗಳನ್ನು ಆಂಗ್ಲ ಭಾಷೆಗೆ ಡಬ್ಬಿಂಗ್ ಮಾಡುವ ಮೂಲಕ ನಿರ್ದೇಶನಾಲಯದ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಗೊಳಿಸಲಾಗಿದೆ.

https://fb.watch/cGax3H3no5/

ಯುನಿಸೆಫ್ ಸಹಯೋಗದೊಂದಿಗೆ ಪ್ರಕಟಿಸಿರುವ ಪುಸ್ತಕಗಳು

ಘನತೆಯ ಬದುಕು:

ಮಕ್ಕಳ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರ ಹಾಗೂ ಮಕ್ಕಳ ಹಕ್ಕುಗಳನ್ನು ಕಾಪಾಡಲು ಮತ್ತು ಮಕ್ಕಳ ಘನತೆಯನ್ನು ಎತ್ತಿ ಹಿಡಿಯಲು ಮಕ್ಕಳ ಪ್ರಕರಣಗಳ ಕುರಿತು ವರದಿ ಮಾಡುವಾಗ ಎಚ್ಚರಿಕೆ ವಹಿಸಬೇಕಾದ ಸಂವೇದನಾಶೀಲ ಸೂಕ್ಷ್ಮತೆಗಳ ಮಾಹಿತಿ ಕೈಪಿಡಿ.



ಮಕ್ಕಳ ಹಕ್ಕುಗಳ ಗ್ರಾಮಸಭೆ:

ಮಕ್ಕಳ ಹಕ್ಕುಗಳ ಗ್ರಾಮಸಭೆ ಆಯೋಜಿಸಲು ಗ್ರಾಮಪಂಚಾಯಿತಿಗೊಂದು ಮಾರ್ಗದರ್ಶಿ ಕೈಪಿಡಿ ಹಾಗೂ ಮಕ್ಕಳ ಹಕ್ಕು ಮತ್ತು ಮಕ್ಕಳ ಸಂರಕ್ಷಣೆಗಾಗಿರುವ ಪ್ರಮುಖ ಸುತ್ತೋಲೆಗಳು

